# ಬುದ್ಧ ನಕ್ಕ

■ ಜಿ.ವಿ. ಅರುಣ



ಕಳೆದ ಎರಡು ವರ್ಷಗಳಿಂದ ಜಿತೇಂದ್ರನ ಕರಕುಶಲ ಎಂಪೋರಿಯಂನಲ್ಲಿ ವ್ಯಾಪಾರ ಅಷ್ಟಕಷ್ಟೇ ಇತ್ತು. ಅದಕ್ಕೆ ಕಾರಣವನ್ನು ಹೇಳಬೇಕಾಗಿಲ್ಲ, ಅನಿಷ್ಟಕ್ಕೆಲ್ಲ.

ಮೊನ್ನೆ ಬುದ್ಧಪೌರ್ಣಿಮೆಗೆ ಅವನು ತನ್ನ ಅಂಗಡಿಯಲ್ಲಿದ್ದ ಬುದ್ಧನ ವಿಗ್ರಹಗಳನ್ನೆಲ್ಲ ತೆಗೆದು, ಧೂಳು ಹೊಡೆದು ಮುಂದೆಯೇ ಕಾಣುವಂತೆ ಇಟ್ಟಿದ್ದ. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಮಾಡಿದ್ದ ಲಾಫಿಂಗ್ ಬುದ್ಧನ ಮೂರು ವಿಗ್ರಹಗಳು ಬಹಳ ದಿನಗಳಿಂದ ಮಾರಾಟವಾಗದೆ ಹಾಗೆ ಉಳಿದುಬಿಟ್ಟಿದ್ದವು. ಲಾಫಿಂಗ್ ಬುದ್ಧನ ಪಕ್ಕದಲ್ಲಿ ಚಿನ್ನದ ಬಣ್ಣದ ತೂತುಕಾಸಿನ ಗುಪ್ಪೆಯ ಮೇಲೆ ಕಪ್ಪೆಯೊಂದು ಚಿನ್ನದ ಬಣ್ಣದ ಒಂದು ತೂತುಕಾಸನ್ನು ಕಚ್ಚಿಕೊಂಡು ಕುಳಿತಿತ್ತು. ಚೀನಾ ದೇಶದ ಕಲಾಕೃತಿಯಾಗಿ ನಮ್ಮ ದೇಶಕ್ಕೆ ಅದು ದಾಳಿ ಇಟ್ಟಿತ್ತು. ಅಲ್ಲದೆ ನಮ್ಮಲ್ಲಿದ್ದ ಸೌಮ್ಯ ಮುಖದ, ಆನಂದ ತುಂಬಿದ, ಅರೆಬಿರಿದ ಕಣ್ಣುಗಳ ಬುದ್ಧನನ್ನು, ಅಷ್ಟೈಶ್ವರ್ಯವನ್ನು ತೊರೆದು ಬಂದಿದ್ದ ಬುದ್ಧನನ್ನು, ಆಸೆಯೇ ದುಃಖಕ್ಕೆ ಕಾರಣ ಎಂದು ಸಾರಿದ್ದ ಬುದ್ಧನನ್ನು ಹಿಂಬದಿಗೆ ತಳ್ಳಿಬಿಟ್ಟಿತ್ತು. ಎಲ್ಲ ವ್ಯಾಪಾರಿಗಳಂತೆ ಜಿತೇಂದ್ರನಿಗೂ ಒಟ್ಟಿನಲ್ಲಿ ವ್ಯಾಪಾರ ಆಗಬೇಕಾಗಿತ್ತು, ಅಷ್ಟೆ; ವಿಗ್ರಹ ಯಾವುದಾದರೇನು!

ಅಂದು ಅಂಗಡಿಗೆ ಬಂದವರೊಬ್ಬರು ಎಲ್ಲ ವಿಗ್ರಹಗಳನ್ನು ಪರಿಶೀಲಿಸಿ, ಈ ಲಾಫಿಂಗ್ ಬುದ್ಧನ ವಿಗ್ರಹವನ್ನು ನೋಡುತ್ತಾ 'ಈ ಬುದ್ಧ ಯಾಕೆ ನಗುತ್ತಿದ್ದಾನೆ?' ಎಂದು ಕೇಳಿದರು. ಆ ಪ್ರಶ್ನೆಯನ್ನು ಇದುವರೆವಿಗೂ ಜಿತೇಂದ್ರನಿಗೆ ಯಾರೂ ಕೇಳಿರಲಿಲ್ಲ. ಅವನಿಗೆ ಅದಕ್ಕೆ ಉತ್ತರವೂ ಗೊತ್ತಿರಲಿಲ್ಲ. ಏನೂ ಉತ್ತರಿಸದೆ, ಬಂದಿದ್ದ ಗಿರಾಕಿಯ ಮುಖವನ್ನು ನೋಡಿದ. ಅವರು ತಮ್ಮ ತಲೆಯನ್ನು ಮೇಲಕ್ಕೆ ಎತ್ತಿ, ಹುಬ್ಬುಗಳನ್ನು ಮೇಲಕ್ಕೆ ಹಾರಿಸಿ, ಅವರ ಪ್ರಶ್ನೆ ಇನ್ನೂ ಜೀವಂತವಾಗಿದೆ ಎಂದು ಸೂಚಿಸಿದರು.

'ಅದನ್ನು ಕೊಂಡುಕೊಂಡು ಹೋದವರ ಮನೆಯಲ್ಲಿ ನಗುವಿನ, ಆನಂದದ ಹೊಳೆ ಹರಿಯುತ್ತದಂತೆ ಸರ್. ಅದಕ್ಕೆ ತುಂಬಾ ಜನ ಕೊಂಡು ಹೋಗುತ್ತಾರೆ' ಎಂದು ತಕ್ಷಣಕ್ಕೆ ಹೊಳೆದ ಉತ್ತರವನ್ನು ಹೇಳಿದ. ಕೇಳಿದವರ ಪ್ರಶ್ನೆಗೆ ಅದು ಉತ್ತರವಲ್ಲ ಎಂದು ಜಿತೇಂದ್ರನಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಆ ಗೌರವಾನ್ವಿತ ಗಿರಾಕಿಯ ಮುಖವು ಇವನ ಉತ್ತರದಿಂದ ಪ್ರಸನ್ನವಾಗಿದ್ದು ಅವನ ಪಳಗಿದ ವ್ಯಾಪಾರಿ ದೃಷ್ಟಿಗೆ ಕಾಣಿಸಿಯೇಬಿಟ್ಟಿತು.

ಅದಕ್ಕೆ ಜಿತೇಂದ್ರನು ಮಾರಾಟದ ಬೆಲೆಯ ಎರಡರಷ್ಟು ಬೆಲೆಯನ್ನು ಹೇಳಿದ. 'ಕಾರ್ಡ್ ತೊಗೋತೀರಿ ಅಲ್ವಾ?' ಎಂದು ಆ ಗಿರಾಕಿಯು ಚೌಕಾಸಿ ಮಾಡದೆ ಕೇಳಿದರು. ಆ ವಿಗ್ರಹವನ್ನು ಪೆಟ್ಟಿಗೆಯಲ್ಲಿ ಇಟ್ಟು, ಚೆನ್ನಾಗಿ ಕಟ್ಟಿ, ಅವನೇ ಅವರ ಕಾರಿನಲ್ಲಿ ಅದನ್ನು ಇಟ್ಟು ಬಂದ.

ಅಂಗಡಿಯಲ್ಲಿ ಉಳಿದಿದ್ದ ಇನ್ನೆರಡು ಲಾಫಿಂಗ್ ಬುದ್ಧನ ವಿಗ್ರಹಗಳನ್ನು ಜಿತೇಂದ್ರ ಆಪ್ಯಾಯಮಾನವಾಗಿ ನೋಡುತ್ತಾ, ಮುಗುಳುನಗೆ ನಕ್ಕ.

ಎರಡೇ ನಿಮಿಷಗಳಲ್ಲಿ ಮತ್ತೊಬ್ಬರು ತಮ್ಮ ಹೆಂಡತಿಯ ಜೊತೆ ಎಂಪೋರಿಯಮ್ ಒಳಗೆ ಬಂದಿದ್ದರು. ಕಂಚಿನ, ತಾಮ್ರದ, ಹಿತ್ತಾಳೆಯ ಎಲ್ಲ ವಿಗ್ರಹಗಳನ್ನು ನೋಡಿ ಅವರಿಬ್ಬರು ಬಂದು ನಿಂತದ್ದು ಆ ಲಾಫಿಂಗ್ ಬುದ್ಧನ ಪ್ಲಾಸ್ಟರ್ ಆಫ್ ಪ್ಯಾರಿಸ್ ಮೂರ್ತಿಯ ಮುಂದೆ. ಇವರೂ ಹಿಂದೆ ಬಂದಿದ್ದ ಗಿರಾಕಿಯು ಕೇಳಿದ ಪ್ರಶ್ನೆಯನ್ನೇ ಕೇಳಿದರು. 'ಈ ಬುದ್ಧ ಯಾಕೆ ನಗುತ್ತಾ ಇರುವುದು?'

ಜಿತೇಂದ್ರನು ಮೊದಲು ಉತ್ತರಿಸದೆ ಅವರ ಮುಖ ನೋಡಿದ. ಅನಂತರ ಅವರ ಹೆಂಡತಿಯ ಮುಖ ನೋಡುತ್ತ, 'ಸರ್ ಅದು' ಎಂದು ರಾಗ ಎಳೆದ.

ಗಂಡ ಹೆಂಡತಿಯರಿಬ್ಬರು ಅವನನ್ನೇ ಗಮನಿಸುತ್ತಿರುವುದನ್ನು ಖಚಿತಪಡಿಸಿಕೊಂಡು, ಪಿಸುಗುಟ್ಟುವಂತೆ, 'ಅದೊಂದು ಗುಟ್ಟು ಸರ್! ಈ ವಿಗ್ರಹವನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ಇಟ್ಟುಕೊಂಡ ಕೆಲವೇ ದಿನಗಳ ಅನಂತರ, ತಾನಾಗಿಯೇ ಆ ಗುಟ್ಟು ಅವರಿಗೆ ತಿಳಿಯುತ್ತದಂತೆ ಸರ್' ಎಂದ. ಗಂಡ ಹೆಂಡತಿ, ಇಬ್ಬರು ಮುಖಮುಖ ನೋಡಿಕೊಂಡು, ಮತ್ತೆ ಇವನು ಇನ್ನೇನಾದರು ಹೇಳುತ್ತಾನೋ ಎಂದು ಅವನತ್ತ ನೋಡಿದರು. ಈಗ ಅವನು ಏನಾದರು ಹೇಳಲೇಬೇಕಾಗಿತ್ತು. ಆಕೆಯ ಮುಖವನ್ನು ನೋಡುತ್ತ, 'ಹಿಂದೆ ಇದನ್ನು ತೆಗೆದುಕೊಂಡು ಹೋದವರು, ಸ್ವಲ್ಪ ದಿನಗಳ ಮೇಲೆ ಫೋನ್ ಮಾಡಿ, ನನಗೆ ಆ ವಿಗ್ರಹವನ್ನು ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳಿದ್ದಾರೆ ಮೇಡಮ್' ಎಂದ.

ಆಕೆಯ ಗಂಡ ಅವಳತ್ತ 'ಏನು ಮಾಡೋಣ?' ಎನ್ನುವಂತೆ ನೋಡಿದರು. ಆಕೆ ತನ್ನ ಕಣ್ಣಿನಿಂದಲೇ ಅದನ್ನು ತೆಗೆದುಕೊಳ್ಳುವಂತೆ ಸೂಕ್ಷ್ಮವಾಗಿ ಸೂಚಿಸಿದಳು. ಇವನೂ ಜಿತೇಂದ್ರ ಸೂಕ್ಷ್ಮವಾಗಿ ಗಮನಿಸಿದ.

ಈ ಬಾರಿ ಅದರ ಮುಖಬೆಲೆಯ ಐದು ಪಟ್ಟು ಹೆಚ್ಚು ಮಾಡಿ ಹೇಳಿ, ಚೌಕಾಸಿಗೆ ಕಾದು ನಿಂತ. ಅವರೋ 'ಇದಕ್ಕೆ ಹಾಕ್ಲಾ?' ಎಂದು ಅಲ್ಲೇ ನೇತುಹಾಕಿದ್ದ ಕ್ಯುಆರ್ ಕೊಡಿಗೆ ಬೆಟ್ಟು ಮಾಡಿ ತೋರಿಸಿದರು.

ಆ ಲಾಫಿಂಗ್ ಬುದ್ಧನನ್ನು ಗಿಫ್ಟ್ ಪ್ಯಾಕ್ ಮಾಡಿ ಕೆಂಪು ಬಣ್ಣದ ರಿಬ್ಬನ್ನನ್ನು ಆಕರ್ಷಕವಾಗಿ ಕಟ್ಟಿ, 'ಸರ್, ಇದನ್ನು ಯಾರಿಗಾದರೂ ಬಹುಮಾನವಾಗಿ ಕೊಡ್ತಿದ್ದೀರಾ?' ಎಂದು ಕೇಳಿದ. ಆತ ಉತ್ತರಿಸುವ ಮೊದಲೇ, ಆತನ ಹೆಂಡತಿ 'ಇಲ್ಲ, ಇಲ್ಲ. ಇದು ನಮ್ಮ ಮನೆಗೆ' ಅಂದರು.

'ಬಹಳ ಒಳ್ಳೆಯದ್ದಾಯ್ತು ಮೇಡಮ್. ನಾನು ಈ ರೀತಿ ಕೇಳಬಾರದು. ಆದರೆ ಇದು ನಿಮ್ಮ ಮನೆಯಲ್ಲೇ ಇರಲಿ ಅಂತ ಹೇಳೋಣ ಅಂದುಕೊಂಡು ಕೇಳಿದೆ' ಎಂದ. ಅದನ್ನು ಕೇಳಿ ಅವರಿಗೂ ಸಂತೋಷವಾಗಿತ್ತು.

'ಕಾರಲ್ಲಿ ಇಡ್ಲಾ ಸರ್?' ಎಂದು ಕೇಳಿದ. ಅವರು 'ಬೇಡ, ಬೇಡ. ನಾನೇ ಹುಷಾರಾಗಿ ತೆಗೆದುಕೊಂಡು ಹೋಗ್ತೀನಿ' ಎಂದು ಅದನ್ನು ಜಾಗರೂಕತೆಯಿಂದ ಎತ್ತಿಕೊಂಡರು.

'ಹುಷಾರು ರೀ' ಎಂದು ಅವರ ಹೆಂಡತಿ ಮುಂದೆ ಹೋಗಿ, ಕಾರಿನ ಹಿಂಬದಿಯ ಬಾಗಿಲನ್ನು ತೆಗೆದರು.

ಉಳಿದಿದ್ದ ಒಂದೇ ಒಂದು ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ಲಾಫಿಂಗ್ ಬುದ್ಧನನ್ನು ಖುಷಿಯಿಂದ, ಅರಳಿದ ನಗುಮುಖದಿಂದ ಜಿತೇಂದ್ರ ನೋಡಿದ. ಇದ್ದಕ್ಕಿದ್ದ ಹಾಗೆ ಅವನಿಗೆ ಏನನ್ನಿಸಿತೋ ಏನೋ, ತನ್ನ ಮಾತಿನ ಮೇಲೆ ಅವನಿಗೆ ಅಪಾರವಾದ ನಂಬಿಕೆ ಬಂದುಬಿಟ್ಟಿತು!

'ನಿನ್ನನ್ನು ರಾತ್ರಿ ನಮ್ಮ ಮನೆಗೆ ಕರೆದುಕೊಂಡು ಹೋಗ್ತೀನಿ!' ಎಂದು ಆ ವಿಗ್ರಹವನ್ನು ಒಳಗೆ ತೆಗೆದುಕೊಂಡು ಹೋಗಿ ಇಟ್ಟುಕೊಂಡ.

ನಮ್ಮ ಬುದ್ಧ ನಕ್ಕ.

ಪ್ರತಿಕ್ರಿಯಿಸಿ: feedback@sudha.co.in